# ಮಕ್ಕಳಿಗಾಗಿ ಬೈಬಲ್

## ಅರ್ಪಿಸುವ



# ಸುಂದರನಾದ ಮೂರ್ಖ ಅರಸ


ಬರಹಗಾರರು: Edward Hughes
ಚಿತ್ರಲೇಖಕರು: Janie Forest; Alastair Paterson
ಅಳವಡಿಸುವವರು: Lyn Doerksen
ಪದ್ಮಾ ಸೈಲೇಸ್: Vinay Shirol



ತಯಾರಕರು: Bible for Children
www.M1914.org

BFC
PO Box 3
Winnipeg, MB R3C 2G1
Canada



©2021 Bible for Children, Inc.
ಅನುಮತಿ: ಈ ಕಥೆಯನ್ನು ಉಪಯೋಗಿಸುವದಕ್ಕೆ ಮತ್ತು ಮುದ್ರಣಹಾಕುವದಕ್ಕೆ ನಿಮಗೆ ಅನುಮತಿ ಇರುವದು. ಆದರೆ, ಇದನ್ನು ನೀವು ಯಾವ ಕಾರಣಕ್ಕಾಗಿಯೂ ಮಾರಾಟಮಾಡಬಾರದು.




ಇಸ್ರಾಯೇಲ್ಯರ ನ್ಯಾಯ ಸ್ಥಾಪಕನು ನಾಯಕನು ಆದ ಸಮುವೇಲನಿಗೆ ವಯಸ್ಸಾಯಿತು. ಆತನು ತನ್ನ ಮಕ್ಕಳನ್ನು ಇಸ್ರಾಯೇಲ್ಯರ ಮೇಲೆ ನ್ಯಾಯ ಸ್ಥಾಪಕನಾಗಿ ನೇಮಿಸಿದನು. ಆದರೆ ಅವರು ದುಷ್ಟರಾಗಿದ್ದರು. ಅವರಿಗೆ ಹಣದ ಮೇಲೆ ಪ್ರೀತಿ ಇದ್ದುದ್ದರಿಂದ ಅವರಿಗಿರುವ ಆಧಿಕಾರವನ್ನು ದುರುಪಯೋಗಪಡಿಸಿಕೊಂಡು ಅಪ್ರಮಾಣಿಕರಾದರು.



ಸಮುವೇಲನ ಮಕ್ಕಳ ನಿಮಿತ್ತದಿಂದ ಇಸ್ರಾಯೇಲ್ ಜನರು ಕ್ಷಿಣಿಸಿ ಹೋದರು. ಮತ್ತು ಅವರಿಂದ ಏನಾದರೂ ಸಹಾಯ ಬೇಕಾದಲ್ಲಿ ಇಸ್ರಾಯೇಲ್ಯರು ಹಣವನ್ನು ಕೊಟ್ಟು ಪಡೆಯಬೇಕಾಗಿತ್ತು. ಒಂದು ದಿನ ಇಸ್ರೆಯೇಲರ ಹಿರಿಯರು ಒಟ್ಟಾಗಿ ಬಂದು ಸಮುವೇಲನಿಂದ ಸಹಾಯವನ್ನು ಬಯಸಿದರು.



3

ಸಮುವೇಲನ ಮಕ್ಕಳ ದುರ್ನಡತೆಯಿಂದ ಬೇಸತ್ತು ಹಿರಿಯರು ಬಂದು ಸಮುವೇಲನ ಹತ್ತಿರ ಬಿನ್ನಹವನ್ನು ಇಟ್ಟರು ಅದೇನೆಂದರೆ, ನಮ್ಮ ಸುತ್ತಲು ಇರುವಂತ ಎಲ್ಲಾ ದೇಶದ ಜನರಿಗೆ ನ್ಯಾಯವನ್ನು ಕೊಡುವುದಕ್ಕೆ ಹೇಗೆ ರಾಜನಿರುತ್ತಾನೋ ಅದೇ ಪ್ರಕಾರ ನಮಗೂ ಸಹಾ ರಾಜನನ್ನು ಕೊಡು ಎಂದು ಕೇಳಿಕೊಂಡರು.



4

ಸಮುವೇಲನಿಗೆ ಸಿಟ್ಟು ಬಂತು ಏಕೆಂದರೆ ಈಗಾಗಲೇ ಇಸ್ರಾಯೇಲ್ಯರಿಗೆ ರಾಜನಿದ್ದಾನೆ ಅವನು ಸರ್ವಶಕ್ತನು ನಿತ್ಯ ಸ್ವರೂಪನು ಐಗುಪ್ತರ ಕೈಯಿಂದ ಬಿಡಿಸಿ ಕೆಂಪು ಸಮುದ್ರವನ್ನು ವಿಭಾಗಮಾಡಿ ಅವನಿಂದ ನಿಮ್ಮನ್ನು ತಪ್ಪಿಸಿದಾತನು.

5



ಆಗ ಅವರ ಸುಂದರವಾದ ಭೂಮಿಯನ್ನು ಇಸ್ರಾಯೇಲ್ಯರಿಗೆ ಕೊಟ್ಟನು.

6

ಸಮುವೇಲನು ಪ್ರಾರ್ಥಿಸಿದಾಗ ದೇವರು ಹೇಳಿದ್ದೆನೆಂದರೆ, ಅವರು ನಿನ್ನನು ತಿರಸ್ಕರಿಸಲಿಲ್ಲಾ ನನ್ನನ್ನೇ ತಿರಸ್ಕರಿಸಿದ್ದಾರೆ ಎಂದನು. ನಾನು ಅವರನ್ನು ಆಳುವುದಿಲ್ಲ ಅವರು ಬೇರೆ ದೇವರನ್ನು ಸೇವಿಸುತ್ತಿದ್ದಾರೆ, ಅದರ ಧ್ವನಿಯನ್ನು ಕೇಳಿ ರಾಜನನ್ನು ಬಯಸುತ್ತಿದ್ದಾರೆ.



7



ದೇವರು ಸಮುವೇಲನಿಗೆ ಹೇಳಿದ್ದೆನೆಂದರೆ ನೀನು ಹೀಗೆ ಹೇಳು ನಿಮಗೆ ರಾಜನಾಗಿ ಬರುವಂತವನು ನಿಮ್ಮಿಂದ ಕಂದಾಯ, ಸುಂಕ, ನಿಮ್ಮ ಹೊಲದ ಫಲವನ್ನು, ಮತ್ತು ನಿಮ್ಮ ಗಂಡು ಮಕ್ಕಳನ್ನು ಸೈನಿಕರಾಗಿ, ನಿಮ್ಮ ಹೆಣ್ಣು ಮಕ್ಕಳನ್ನು ತನ್ನ ಕೆಲಸಕ್ಕಾಗಿ ತಗೆದುಕೊಳ್ಳುವವನೆಂದು ಎಚ್ಚರಿಸು ಅಂದನು.

8

ಏನೇ ಇರಲಿ ಜನರು ‘ರಾಜನು’ ಬೇಕು ಎಂದರು.




9

ಸುಂದರನು ಮತ್ತು ಬಹಳ ಎತ್ತರವಾದ ಒಬ್ಬ ಯೌವನಸ್ಥನ ಬಳಿಗೆ ದೇವರು ಸಮುವೇಲನನ್ನು ಕಳಿಸಿದನು. ಅವನು ಎಲ್ಲಾರಿಗಿಂತ ಎತ್ತರವುಳ್ಳವನು ಅವನ ಹೆಸರು ಸೌಲನು. ಸಮುವೇಲನು ಸೌಲನನ್ನು ನೋಡಿದಾಗ ಇವನೇ ನನ್ನ ಜನರನ್ನು ಆಳುವವನು ಎಂದು ದೇವರು ತಿಳಿಸಿದನು.



10

ದೇವರ ಮಾತಿಗೆ ಸಮುವೇಲನು ವಿಧೇಯನಾಗಿ ಸೌಲನನ್ನು ರಾಜನನ್ನಾಗಿ ಅಭಿಷೇಕಿಸಿದನು. ಸೌಲನು ಇಸ್ರಾಯೇಲ್ಯರ ಮುಂದೆ ಹೋದಾಗ ಅವರು ರಾಜನೇ ಚಿರಂಜಿವಿಯಾಗಿರು ಎಂದು ಆರ್ಭಟಿಸಿದರು.



11

ಇಸ್ರಾಯೇಲ್ಯರನ್ನು ತಿರಸ್ಕಾರ ಮಾಡುವ ಅಮೋರಿಯರಿಂದ ಅರಸನಾದ ಸೌಲನಿಗೆ ಒಂದು ಪರೀಕ್ಷೆವುಂಟಾಯಿತು, ಇಸ್ರಾಯೇಲ್ಯರ ಪಟ್ಟಣವನ್ನು ಸುತ್ತುವರಿದು ಅದರ ಮೇಲೆ ಅವರ ಬಲಗಣ್ಣಿಟ್ಟು ಕ್ರೂರವಾದಂತ ಯೋಜನೆಯನ್ನು ರೂಪಿಸಿಕೊಂಡರು. ಈ ಸುದ್ದಿಯು ಅರಸನಿಗೆ ತಿಳಿದಾಕ್ಷಣ ಅವನು ಸೈನ್ಯವನ್ನು ಸಿದ್ದಪಡಿಸಿಕೊಂಡನು.



12

ಸೌಲನು ಅಮೋರಿಯರನ್ನು ನಾಶಪಡಿಸಿ ಪಟ್ಟಣವನ್ನು ಉಳಿಸಿದನು. ‘ಈ ದಿನ ದೇವರು ಇಸ್ರಾಯೇಲ್ಯರಿಗೆ ರಕ್ಷಣೆಯನ್ನು ಕೊಟ್ಟನೆಂದು’ ಸೌಲನು ದೇವರಿಗೆ ಮಹಿಮೆಯನ್ನು ಸಲ್ಲಿಸಿದನು.



13

ದೇವರು ವಿಷೇಶವಾದ ಜಯವನ್ನು ಕೊಟ್ಟರು, ಸೌಲನು ಯಾವಾಗಲೂ ದೇವರಿಗೆ ಗೌರವವನ್ನು ಕೊಡುತ್ತಿರಲಿಲ್ಲ. ಒಂದು ದಿನ ಸೌಲನು ಪಿಲಿಷ್ಟಿಯರೊಂದಿಗೆ ಯುದ್ದ ಮಾಡುವ ಮೊದಲು ದೇವರಿಗೆ ಯಜ್ಞವನ್ನು ಅರ್ಪಿಸಿದನು. ಆ ಯಜ್ಞವನ್ನು ಅರ್ಪಿಸುವ ಕೆಲಸವು ಸಮುವೇಲನದು ಎಂದು ತಿಳಿದಿದ್ದರು, ಅವನು ಬರುವ ತನಕ ಆತನಿಗೋಸ್ಕರ ಕಾಯದೆ, ಸೌಲನು ದೇವರಿಗೆ ಅವಿದೇಯನಾಗಿ ನಡೆದನು.



14

ಸಮುವೇಲನು ಬಂದು ಸೌಲನಿಗೆ ಹೇಳಿದ್ದೇನೆಂದರೆ, ನೀನು "ಮೂರ್ಖನಾಗಿ ನಡೆದುಕೊಂಡಿದ್ದಿಯ ಮತ್ತು ನೀನು ನಿನ್ನ ದೇವರ ಆಜ್ಞೆಯನ್ನು ಪಾಲಿಸದೆ ಇರುವುದರಿಂದ ನಿನ್ನ ರಾಜ್ಯವು ಮುಂದುವರಿಯುವುದಿಲ್ಲಾ ಅಂದನು."



15

ಸೌಲನು ಒಂದುವೇಳೆ ಇದು ಸಣ್ಣ ಪಾಪ ಎಂದು ಅಂದು ಕೊಂಡಿರಬಹುದು, ಆದರೆ ಅವಿಧೇಯತ್ವವು ದೇವರ ದೃಷ್ಟಿಯಲ್ಲಿ ಯಾವಾಗಲೂ ಗಂಭೀರವಾಗಿದೆ.



16

ಒಂದು ದಿನ ದೇವರು ಆ ದುಷ್ಟ ಅಮಾಲೇಕ್ಯರನ್ನು ಸಂಪೂರ್ಣವಾಗಿ ನಾಶಮಾಡು ಎಂದು ಹೇಳಿದರು, ಆತನು ಹಾಗೆ ಮಾಡದೆ ಅವರ ಅರಸನಾದ ಆಗಾಗನನ್ನು ಹಾಗೇಯೆ ಉಳಿಸಿದನು.



17

ಆಷ್ಟೆಯಲ್ಲದೆ ಅದರಲ್ಲಿ ಮೇಲ್ತರದ ಕುರಿ, ಧನಗಳನ್ನೂ, ಕುರಿಮರಿಗಳನ್ನೂ, ಕೊಬ್ಬಿದಪಶುಗಳನ್ನೂ ಶ್ರೇಷ್ಟವಾದ ಎಲ್ಲಾ ಪದಾರ್ಥಗಳನ್ನು ನಾಶಮಾಡದೆ ದೇವರಗೆ ಯಜ್ಞವನ್ನು ಅರ್ಪಿಸುವುದಕ್ಕಾಗಿ ಉಳಿಸಿದನು.



18

ಸಮುವೇಲನು ಸೌಲನಿಗೆ ಹೇಳಿದ್ದೆನೆಂದರೆ 'ದೇವರು ವಿಧೇಯತ್ವಕ್ಕೆ ಮೆಚ್ಚುವಷ್ಟು ಯಜ್ಞಹೊಮಗಳಿಗೆ ಮೆಚ್ಚುತ್ತಾನೋ?' ನೀನು ದೇವರ ವಾಕ್ಯವನ್ನು ತಿರಸ್ಕಾರ ಮಾಡಿದ್ದಿಯಾ, ಆದುದ್ದರಿಂದ ನಿನ್ನನ್ನು ದೇವರು ತಳ್ಳಿ ಹಾಕುವವನಾಗಿದ್ದಾನೆ. ಅದನ್ನು ಕೇಳಿದ ಸೌಲನು ತಾನು ಮಾಡಿದ ಪಾಪಕ್ಕೆ ಪಶ್ಚತ್ತಾಪ ಪಟ್ಟನು, ಆದರೆ ಅದು ಬಹಳ ತಡವಾಗಿತ್ತು. ಸೌಲನು ದೇವರಿಗೆ ಅವಿಧೇಯನಾಗಿ ನಡೆದಿದ್ದರಿಂದ ಅವನ ಜೀವಮಾನಕಾಲವೇಲ್ಲ ಸಂತೋಷವಾಗಿರಲು ಆಗಲಿಲ್ಲ.



19

ಸುಂದರನಾದ ಮೂರ್ಖ ಅರಸ

ದೇವರ ವಾಕ್ಯವಾದ ಬೈಬಲ್‌ನಿಂದ ಆರಿಸಿದ ಕಥೆ

ಸಿಕ್ಕುವ ಭಾಗ

**1 ಸಮುವೇಲು 8–16**

"ನಿನ್ನ ವಾಕ್ಯವಿವರಣೆಯಿಂದ ಜ್ಞಾನೋದಯವಾಗುವದು."
ಕೀರ್ತನೆ 119:130

20

# ಮುಕ್ತಾಯ

18

60



ಅದ್ಭುತನಾದ ದೇವರು ನಮ್ಮನ್ನು ಉಂಟು ಮಾಡಿರುವನೆಂದು ಮತ್ತು ನಾವು ಆತನನ್ನು ಕಂಡುಕೊಳ್ಳಬೇಕೆಂದು ದೇವರು ಇಷ್ಟಪಡುತ್ತಾನೆಂದು ಈ ಬೈಬಲ್ ಕಥೆಯು ತಿಳಿಸುತ್ತದೆ.

ನಾವು ಕೆಟ್ಟ ಕೆಲಸಗಳನ್ನು ಮಾಡಿರುವದು ದೇವರಿಗೆ ತಿಳಿದಿರುತ್ತದೆ. ಈ ಕೆಟ್ಟ ಕೆಲಸಗಳನ್ನು ದೇವರು ಪಾಪವೆಂದು ಕರೆಯುತ್ತಾನೆ. ಪಾಪದ ಶಿಕ್ಷೆಯು ಮರಣವಾಗಿದೆ. ಆದರೆ ನಮ್ಮ ಪಾಪದ ಶಿಕ್ಷೆಯನ್ನು ತನ್ನ ಮೇಲೆ ಹೊತ್ತುಕೊಂಡು ಶಿಲುಬೆಯ ಮೇಲೆ ಪ್ರಾಣ ಕೊಡಲು ದೇವರು ತನ್ನ ಒಬ್ಬನೇ ಮಗನಾದ ಯೇಸುಕ್ರಿಸ್ತನನ್ನು ಈ ಲೋಕಕ್ಕೆ ಕಳುಹಿಸಿಕೊಟ್ಟನು. ಯೇಸುಕ್ರಿಸ್ತನು ಸತ್ತವರೊಳಗಿಂದ ತಿರುಗಿ ಎದ್ದು ಬಂದು ಪರಲೋಕಕ್ಕೆ ಏರಿಹೋಗಿದ್ದಾನೆ. ನಿನ್ನ ಪಾಪದ ಶಿಕ್ಷೆಯನ್ನು ಯೇಸುಕ್ರಿಸ್ತನು ತೀರಿಸಿದ್ದಾನೆ. ಆತನು ನಿನ್ನ ಪಾಪಗಳನ್ನು ಕ್ಷಮಿಸುತ್ತಾನೆ. ಆದರೆ ನಿನ್ನ ಪಾಪಗಳನ್ನು ಕ್ಷಮಿಸಬೇಕೆಂದು ನೀನು ಆತನಿಗೆ ಕೇಳಿಕೊಳ್ಳಬೇಕು. ಆತನು ಖಂಡಿತವಾಗಿ ನಿನ್ನ ಪಾಪಗಳನ್ನು ಕ್ಷಮಿಸುವನು ಮತ್ತು ಈಗಲೇ ನಿನ್ನ ಹೃದಯದೊಳಗೆ ಬಂದು ವಾಸಿಸಬಲ್ಲನು! ನೀನು ಆತನೊಂದಿಗೆ ಯಾವಾಗಲೂ ಜೀವಿಸುವಿ.

ನೀನು ಈ ಸತ್ಯವನ್ನು ನಂಬುವದಾದರೆ, ದೇವರಿಗೆ ಈ ಮಾತುಗಳನ್ನು ಹೇಳು:
ಕರ್ತನಾದ ಯೇಸುವೇ, ನೀನು ದೇವರು ಆಗಿರುವಿ ಎಂದು ಮತ್ತು ನನ್ನ ಪಾಪಕ್ಕಾಗಿ ನಿನ್ನ ಪ್ರಾಣವನ್ನು ಕೊಡಲು ಮನುಷ್ಯನಾಗಿ ಬಂದಿರುವಿ ಎಂದು ನಂಬುತ್ತೇನೆ. ಈಗ ನೀನು ಸತ್ತವರೊಳಗಿಂದ ಎದ್ದು ಬಂದು ಯಾವಾಗಲೂ ಜೀವಿಸುವವನಾಗಿರುವಿ, ನನ್ನ ಪಾಪಗಳನ್ನು ದಯವಿಟ್ಟು ಕ್ಷಮಿಸಿ ನನ್ನ ಹೃದಯದೊಳಗೆ ಬಂದು ವಾಸಿಸು. ಹೀಗೆ ಹೊಸ ಜೀವವನ್ನು ಪಡೆದುಕೊಂಡು ಒಂದು ದಿನ ನಾನು ನಿನ್ನ ಬಳಿಗೆ ಬಂದು ನಿನ್ನೊಂದಿಗೆ ಯಾವಾಗಲೂ ಇರುವೆನು. ನಿನಗೆ ವಿಧೇಯನಾಗುವದಕ್ಕೆ ಮತ್ತು ನಿನ್ನ ಮಗನಾಗಿ ಜೀವಿಸುವದಕ್ಕೆ ನನಗೆ ಸಹಾಯಮಾಡು. ಆಮೆನ್.

ನೀನು ಪ್ರತಿದಿನವೂ ಬೈಬಲ್ ಓದು ಮತ್ತು ಪ್ರಾರ್ಥನೆಯಲ್ಲಿ ದೇವರೊಂದಿಗೆ ಮಾತಾಡು!
**ಯೋಹಾನ 3:16**